ಕನ್ನಡಪ್ರಭ

# ಬೆಂಗಳೂರು ಜೈನ್ ವಿವಿಗೆ ದಕ್ಷಿಣ ವಲಯ ಪ್ರಶಸ್ತಿ



**ಬೆಂಗಳೂರು:** ಬೆಂಗಳೂರಿನ ಜೈನ್ ವಿಶ್ವವಿದ್ಯಾಲಯ ತಂಡದ ಆಟಗಾರರು ಪುದುಚೆರಿಯಲ್ಲಿ ನಡೆದ ದಕ್ಷಿಣ ವಲಯ ಅಂತರ ಕಾಲೇಜುಗಳ ಕ್ರಿಕೆಟ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ.

ಜೈನ್ ವಿವಿ ತಂಡ ಫೈನಲ್ ಪಂದ್ಯದಲ್ಲಿ ಚೆನ್ನೈನ ಎಸ್‌ಆರ್‌ಎಂ ವಿವಿ ತಂಡವನ್ನು 3 ವಿಕೆಟ್‌ಗಳಿಂದ ಸೋಲಿಸಿತು. ಈ ಗೆಲವಿನೊಂದಿಗೆ ಜೈನ್ ತಂಡ ಸತತ ಮೂರನೇ ಬಾರಿಗೆ ದಕ್ಷಿಣ ವಲಯ ಚಾಂಪಿಯನ್ ಆಗಿ ಹೊರಹೊಮ್ಮುವ ಮೂಲಕ ಮುಂದಿನ ತಿಂಗಳ ಜನವರಿ 17ರಿಂದ ಉತ್ತರಾಂಚಲದಲ್ಲಿ ಆರಂಭವಾಗಲಿರುವ ಅಖಿಲ ಭಾರತ ವಿವಿ ಕ್ರಿಕೆಟ್ ಚಾಂಪಿಯನ್‌ಶಿಪ್‌ಗೆ ಅರ್ಹತೆ ಪಡೆದುಕೊಂಡಿತು.

ಫೈನಲ್ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಎಸ್‌ಆರ್‌ಎಂ ವಿವಿ ತಂಡ 50 ಓವರುಗಳಲ್ಲಿ 159 ರನ್‌ಗಳಿಸಿತು. ಉತ್ತರಾವಿಗ ಜೈನ್ ವಿವಿ ತಂಡ ಇನ್ನೂ 5 ಎಸೆತಗಳು ಉಳಿದಿರುವಂತೆಯೇ 7 ವಿಕೆಟ್ ನಷ್ಟಕ್ಕೆ 163 ರನ್‌ಗಳಿಸಿ ಗೆಲವು ತನ್ನದಾಗಿಸಿಕೊಂಡಿತು.

ಸಂಕ್ಷಿಪ್ತ ಸ್ಕೋರ್: ಎಸ್‌ಆರ್‌ಎಂ ವಿವಿ 50 ಓವರುಗಳಲ್ಲಿ 159 (ಎಸ್. ನಿಕಿತ್ 28ಕ್ಕೆ5, ಸುಚಿತ್ 33ಕ್ಕೆ3). ಜೈನ್ ವಿವಿ 49.1 ಓವರುಗಳಲ್ಲಿ 7 ವಿಕೆಟ್‌ಗೆ 163 (ಕೆ. ರೋಹನ್ 37, ಎಸ್. ಸೂರಜ್ 40, ಗೌರವ್ 22, ಬಿ. ದಿನೇಶ್ ಅಜೇಯ 30).